# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 167 |
| ಸದಸ್ಯರ ಹೆಸರು | : | ಶ್ರೀ ಟಿ.ಎ. ಶರವಣ |
| ಉತ್ತರಿಸುವ ದಿನಾಂಕ: | : | 10-07-2018 |
| ಉತ್ತರಿಸುವವರು | : | ಮಾನ್ಯ ಉಪ ಮುಖ್ಯಮಂತ್ರಿಗಳು |

| ಕ್ರಸಂ | ಪ್ರಶ್ನೆ | ಉತ್ತರ |
|---|---|---|
| ಅ) | ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿನ ಎಷ್ಟು ವಲಯಗಳಲ್ಲಿ ನಾಗರೀಕರ ಸಮಸ್ಯೆಗೆ ಸ್ಪಂದಿಸುವ ಸಹಾಯವಾಣಿ ಕೇಂದ್ರಗಳು ಸಮರ್ಪಕವಾಗಿ ಕರ್ತವ್ಯನಿರ್ವಹಿಸುತ್ತಿವೆ; | ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿನ ಕೇಂದ್ರ ಕಛೇರಿಯನ್ನು ಒಳಗೊಂಡಂತೆ 8 ವಲಯಗಳಲ್ಲಿ ನಾಗರಿಕರ ಸಮಸ್ಯೆಗಳಿಗೆ ಸ್ಪಂದಿಸಲು ನಿಯಂತ್ರಣ ಕೊಠಡಿಗಳು ದಿನದ 24 ಗಂಟೆಗಳು (24X7) ಕರ್ತವ್ಯನಿರ್ವಹಿಸುತ್ತಿರುತ್ತವೆ.<br><br>ಕೇಂದ್ರ ಹಾಗೂ ವಲಯ ಮಟ್ಟದ ನಿಯಂತ್ರಣ ಕೊಠಡಿಗಳಲ್ಲಿ ಸ್ವೀಕೃತವಾಗುವಂತಹ ದೂರುಗಳನ್ನು ಬಿಬಿಎಂಪಿ ಸಹಾಯ (ಸಾಫ್ಟ್‌ವೇರ್ ಅಪ್ಲಿಕೇಷನ್) ಮುಖಾಂತರ ಉಪ ಆಯುಕ್ತರು (ಮಾನವ ಸಂಪನ್ಮೂಲ), ಐ.ಪಿ.ಪಿ. ತರಬೇತಿ ಕೇಂದ್ರದಲ್ಲಿರುವ ಬಿ.ಬಿ.ಎಂ.ಪಿ.ಯ ಸಹಾಯವಾಣಿ ಕೇಂದ್ರಕ್ಕೆ ರವಾನಿಸಿ, ಅಲ್ಲಿಂದ ಸಂಬಂಧಪಟ್ಟ ಇಲಾಖೆ/ಕಛೇರಿಗೆ ಕಳುಹಿಸಿ ದೂರುಗಳಿಗೆ ಸಕಾಲದಲ್ಲಿ ಸ್ಪಂದಿಸಿ ಮಾಹಿತಿಗಳನ್ನು ದೂರುದಾರರಿಗೆ ನೀಡಲಾಗುತ್ತಿರುತ್ತದೆ. ಸದರಿ ವ್ಯವಸ್ಥೆಯು ಸಮರ್ಪಕವಾಗಿ ಕಾರ್ಯನಿರ್ವಹಿಸುತ್ತಿವೆ. |
| ಆ) | ವಲಯ ಕಛೇರಿಗಳಲ್ಲಿ ದಾಖಲಾಗುವ ದೂರುಗಳು ಸಕಾಲದಲ್ಲಿ ವಿಲೆಯಾಗುತ್ತಿರುವ ಕುರಿತು ಕೇಂದ್ರ ಕಛೇರಿ ಗಮನಕ್ಕೆ ಬರುತ್ತಿದೆಯೇ; ಇಲ್ಲವಾದಲ್ಲಿ ಇದಕ್ಕೆ ಕಂಡುಕೊಂಡ ಮಾರ್ಗೋಪಾಯಗಳೇನು; | ವಲಯ ಕಛೇರಿಗಳಲ್ಲಿ ದಾಖಲಾಗುವ ದೂರುಗಳು ಸಕಾಲದಲ್ಲಿ ವಿಲೇಯಾಗುತ್ತಿರುತ್ತದೆ. |
| ಇ) | ಈ ಹಿಂದೆ ಆರಂಭಿಸಲು- ಉದ್ದೇಶಿಸಲಾಗಿದ್ದ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಕೇಂದ್ರಿಕೃತ ಸಹಾಯವಾಣಿಯ ಕೇಂದ್ರ ತೆರೆಯಲು ಮೀಸಲಿರಿಸಿದ ಅನುದಾನವೆಷ್ಟು; ಅದರಲ್ಲಿ ಈವರೆಗೆ ಬಳಕೆಯಾದ ಅನುದಾನ ಎಷ್ಟು; ಹಾಗೂ ಅದು ಈಗ ಯಾವ ಹಂತದಲ್ಲಿದೆ; | ಹಾಲಿ ಜಾರಿಯಲ್ಲಿರುವ ನಿಯಂತ್ರಣ ಕೊಠಡಿ/ ಸಹಾಯವಾಣಿ ಸಮರ್ಪಕವಾಗಿ ಕಾರ್ಯನಿರ್ವಹಿಸುತ್ತಿದ್ದು, ಆದಾಗ್ಯೂ ಇನ್ನು ಹೆಚ್ಚಿನ ಸಮನ್ವಯ ಹಾಗೂ ಸಮರ್ಪಕವಾಗಿ ನಿಗದಿತ ಸಮಯದಲ್ಲಿ ಸಾರ್ವಜನಿಕರಿಗೆ ಸೇವೆಯನ್ನು ಒದಗಿಸಲು ಅನುಕೂಲವಾಗುವಂತೆ ಕೇಂದ್ರೀಕೃತ ಸಹಾಯವಾಣಿವನ್ನು ಕೇಂದ್ರ ಕಛೇರಿಯಲ್ಲಿ ಆರಂಭಿಸಲು ಉದ್ದೇಶಿಸಲಾಗಿರುತ್ತದೆ. ಸದರಿ ಕೇಂದ್ರೀಕೃತ ಸಹಾಯವಾಣಿಗೆ ಅಗತ್ಯವಿರುವ ಮೂಲಭೂತ ಸೌಕರ್ಯಗಳನ್ನು ಒದಗಿಸಲಾಗಿರುತ್ತದೆ.<br><br>ಮುಂದುವರೆದು, ಸದರಿ ಸಹಾಯವಾಣಿಗೆ ಅಗತ್ಯವಿರುವ ಮಾನವ ಸಂಪನ್ಮೂಲ ಹಾಗೂ ಮಾಹಿತಿ ಮತ್ತು ತಂತ್ರಜ್ಞಾನಕ್ಕೆ (ಐ.ಟಿ.) ಸಂಬಂಧಪಟ್ಟ ಸೌಕರ್ಯಗಳನ್ನು ಒದಗಿಸಲು ಈಗಾಗಲೇ ಟೆಂಡರ್ ಪ್ರಕ್ರಿಯೆ ಪ್ರಗತಿಯಲ್ಲಿರುತ್ತದೆ. |

| | | |
|---|---|---|
| ಈ) | ಸದರಿ ಉದ್ದೇಶಿತ ಸಹಾಯವಾಣಿ ಕೇಂದ್ರವು ಕಾರ್ಯಾರಂಭ ಮಾಡದಿರುವುದಕ್ಕೆ ಕಾರಣಗಳೇನು; ಹಾಗೂ ಮಳೆಗಾಲದ ಸಮಯದಲ್ಲಿ ಜನರು ಅನುಭವಿಸುವ ತೊಂದರೆಗಳಿಗೆ ತುರ್ತಾಗಿ ಸ್ಪಂದನೆ ದೊರಕಲು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯು ತೆಗೆದುಕೊಂಡ ಕ್ರಮಗಳೇನು? (ವಿವರವಾದ ಮಾಹಿತಿ ನೀಡುವುದು.) | ಸದರಿ ಸಹಾಯವಾಣಿಗೆ ಸಿವಿಲ್ ಮೂಲಭೂತ ಸೌಕರ್ಯಗಳು ಪೂರ್ಣಗೊಂಡಿದ್ದು, ಅಗತ್ಯವಿರುವ ಮಾನವ ಸಂಪನ್ಮೂಲ ಹಾಗೂ ಮಾಹಿತಿ ಮತ್ತು ತಂತ್ರಜ್ಞಾನಕ್ಕೆ (ಐ.ಟಿ.) ಸಂಬಂಧಪಟ್ಟ ಸೌಕರ್ಯಗಳನ್ನು ಒದಗಿಸಲು ಈಗಾಗಲೇ ಟೆಂಡರ್ ಪ್ರಕ್ರಿಯೆ ಪ್ರಗತಿಯಲ್ಲಿದ್ದು, ಟೆಂಡರ್ ಅಂತಿಮಗೊಳಿಸಿದ ನಂತರ ಸಹಾಯವಾಣಿ ಕೇಂದ್ರವು ಕಾರ್ಯಾರಂಭ ಮಾಡಲು ಕ್ರಮವಹಿಸಲಾಗುವುದು.<br><br>ಮಳೆಗಾಲದ ಸಮಯದಲ್ಲಿ ಜನರು ಅನುಭವಿಸುವ ತೊಂದರೆಗಳಿಗೆ ತುರ್ತಾಗಿ ಸ್ಪಂದನೆ ದೊರಕಲು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯು ವಿವಿಧ ವಿಭಾಗಗಳಿಗೆ ಈಗಾಗಲೇ ಸ್ಪಷ್ಟ ಸೂಚನೆಗಳನ್ನು ನೀಡಲಾಗಿರುತ್ತದೆ. |

ಸಂಖ್ಯೆ: ನಅಇ 310 ಎಂಎನ್‌ಜೆ 2018

(ಡಾ॥ ಜಿ. ಪರಮೇಶ್ವರ)
ಉಪ ಮುಖ್ಯಮಂತ್ರಿ